www.ecourtsindia.com



**ದಿನಾಂಕ 29.11.2024 ರಂದು ಪಿಡಬ್ಲ್ಯೂ -1 ರವರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಗಿದೆ ಮುಂದುವರೆದ ಪಾಟೀ ಸವಾಲು ಃ 2 ನೇ ಪ್ರತಿವಾದಿ ಪರ ಶ್ರೀ.ಪಿ.ಎನ್.ಎಮ್. ವಕೀಲರಿಂದ**

10. ದಾವಾ ಐಟಂ ನಂ.1 ಸ್ವತ್ತಿನ ಸೈಟ್ ನಂ.120 ಆಗಿದ್ದು ಅದು ನನ್ನ ತಾಯಿಯವರ ಹೆಸರಿನಲ್ಲಿ ಇರುತ್ತದೆ. ದಾವಾ ಐಟಂ ನಂ.1 ಸ್ವತ್ತಿನ ಸೈಟ್ ನಂ.120/1 ಆಗಿದ್ದು ಅದು ಪ್ರತಿವಾದಿ ನಂ.2 ರವರ ಹೆಸರನಲ್ಲಿ ಇರುತ್ತದೆ ಎಂದರೆ ಸುಳ್ಳು. ದಾವಾ ಐಟಂ ನಂ.1 ಸ್ವತ್ತಿನ ವಿಸ್ತೀರ್ಣ 84 X 84 ಇರುತ್ತದೆ. ದಾವಾ ಐಟಂ ನಂ.1 ರ ಸ್ವತ್ತಿನ ಪೂರ್ವಕ್ಕೆ ದರ್ಮೇಶ್ವರ ದೇವಸ್ಥಾನ ಇರುತ್ತದೆ. ದಾವಾ ಐಟಂ ನಂ.1 ರ ಪೂರ್ವಕ್ಕೆ ಕಾಲುವೆ ಬರುತ್ತದೆ ಎಂದರೆ ದರ್ಮೇಶ್ವರ ದೇವಸ್ಥಾನ ಮತ್ತು ಕಾಲುವೆ ಸಹ ಇರುತ್ತದೆ. ದಾವಾ ಐಟಂ ನಂ.1 ರ ಪಶ್ಚಿಮಕ್ಕೆ ಚೆನ್ನಮ್ಮನವರ ಮನೆ, ದಾವಾ ಐಟಂ ನಂ.1 ರ ಉತ್ತರಕ್ಕೆ ಸರ್ಕಾರಿ ಶಾಲೆ. ದಾವಾ ಐಟಂ ನಂ.1 ರ ಉತ್ತರಕ್ಕೆ ಸರ್ಕಾರಿ ಶಾಲೆ ಇರುವುದಿಲ್ಲ ಬದಲಾಗಿ ರಸ್ತೆ ಇರುತ್ತದೆ ಎಂದರೆ ಶಾಲೆ ಮತ್ತು ರಸ್ತೆ ಇರುತ್ತದೆ. ದಾವಾ ಐಟಂ ನಂ.1 ರ ದಕ್ಷಿಣಕ್ಕೆ ಮುನಿಯಮ್ಮನವರ ಮನೆ ಇರುತ್ತದೆ. ದಾವಾ ಐಟಂ ನಂ.1 ರ ದಕ್ಷಿಣಕ್ಕೆ ಅಯ್ಯನವರ ಮನೆ ಬರುತ್ತದೆ ಎಂದರೆ ಮೊದಲಿಗೆ ಅಯ್ಯನವರ ಮನೆ ಇತ್ತು. ದಾವಾ ಐಟಂ ನಂ.1 ಸ್ವತ್ತಿನ ಪೂರ್ವಕ್ಕೆ ಕಾಲುವೆ ಇದೆ ಎಂದು ನಮೂದು ಮಾಡಿಲ್ಲ ಎಂದರೆ ನಿಜ. ಅದೇ ರೀತಿ ದಾವಾ ಸ್ವತ್ತಿನ ಉತ್ತಕ್ಕೆ ರಸ್ತೆ ಇದೆ ಎಂದು ನಮೂದು ಮಾಡಿಲ್ಲ ಎಂದರೆ ನಿಜ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲದೇ ಇರುವ ಕಾರಣ ನನಗೆ ದಾವಾ ಸ್ವತ್ತಿನ ಪೂರ್ವ, ಉತ್ತರ, ದಕ್ಷಿಣದಲ್ಲಿ ಏನು ಇದೆ ಎಂದು ಸರಿಯಾದ ಚೆಕ್ಕುಬಂದಿಯನ್ನು ವಾದಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸುಳ್ಳು.

11. ನನ್ನ ತಂದೆಯವರ ಊರು ದೇವರಜೀವನಹಳ್ಳಿ. ನನ್ನ ತಂದೆಯವರಿಗೆ ಸಂಬಂಧಪಟ್ಟ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ನಿಜ. ನಾನು ಮುಂದುವರೆದು ಹೇಳುವುದೇನೆಂದರೆ ನನಗೆ ತಂದೆಗೆ ಇರುವ ಆಸ್ತಿ ನನಗೆ ಗೊತ್ತಿರುವುದಿಲ್ಲ, ಆ ಕಾರಣ ಸೇರಿಸಿರುವುದಿಲ್ಲ. ನನ್ನ ತಂದೆಯವರ ಹೆಸರಿಗೆ ವಿಶೇಷ ತಹಸಿಲ್ದಾರ್, ಬೆಂಗಳೂರು ಉತ್ತ್ರರ ತಾಲ್ಲೂಕು, ಪ್ರಕರಣ ಸಂಖ್ಯೆ. ಹೆಚ್.ಓ.ಎ. ಸಿ.ಆರ್. 86/90-

This is a True Copy of the Court Records Online. Authenticated @ districts.ecourtsindia.com/cnr/KABR020012132021/truecopy/order-3.pdf

91 ರಂತೆ ನಾಲ್ಕು ಐಟಂ ಆಸ್ತಿಗಳನ್ನು ಮಂಜೂರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದೇವರಜೀವನಹಳ್ಳಿಯಲ್ಲಿ ಹಳೆಯ ಸರ್ವೆ ನಂ.101,102,103,104 ಹೊಸ ಸರ್ವೆ ನಂ.7,65,40,104 ರಲ್ಲಿ ಜಮೀನನ್ನು ತೋಟಿ ಇನಾಮ್ತಿ ಆಧಾರದ ಮೇಲೆ ನಮ್ಮ ತಂದೆಯವರಿಗೆ ಮಂಜೂರು ಮಾಡಿರುತ್ತಾರೆ ಎಂದರೆ ನನಗೆ ಮಂಜೂರು ಮಾಡಿದ ವಿಚಾರ ನನಗೆ ಗೊತ್ತಿಲ್ಲ. ನನ್ನ ತಂದೆಯವರಿಗೆ ಸರ್ವೆ ನಂ.7 ರಲ್ಲಿ 1 ಎಕರೆ 16 ಗುಂಟೆ ಜಮೀನನ್ನು ವಿಶೇಷ ತಹಸಿಲ್ದಾರ್ ರವರು ಮಂಜೂರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಸದರಿ ಜಮೀನುಗಳು ಮಂಜೂರಾದ ವಿಚಾರ ಗೊತ್ತಿದ್ದರೂ ನಾನು ಉದ್ದೇಶಪೂರ್ವಕವಾಗಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

12. ನನ್ನ ತಾಯಿಯವರಿಗೆ ಓದಲು ಬರೆಯಲು ಬರುತ್ತಿರಲಿಲ್ಲ. ನಿಪಿ.2 ವಿಲ್‌ನಾಮೆಯ ಮೂಲ ದಾಖಲೆ ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ನಿಪಿ.2 ವಿಲ್ ನಾಮೆಯನ್ನು ನನಗೆ ನನ್ನ ಬಾವ ರಮೇಶ್ ಎಂಬುವವರು ನನಗೆ ಒದಗಿಸಿಕೊಟ್ಟಿರುತ್ತಾರೆ. ಸದರಿ ರಮೇಶ್ ರವರು 1 ನೇ ವಾದಿಯ ಗಂಡ. ನನಗೆ ಈಗ ವಿಲ್ ನಾಮೆಯ ಮೂಲ ಪ್ರತಿಯನ್ನು ತೋರಿಸಲಾಯಿತು. ಸದರಿ ವಿಲ್ ನಾಮೆ ನಿಪಿ.2 ವಿಲ್ ನಾಮೆಯ ಮೂಲ ಪ್ರತಿ ಎಂದರೆ ನಿಜ. **ಸದರಿ ವಿಲ್ ನಾಮೆಯನ್ನು ನಿಡಿ.1 ಎಂದು ಗುರುತಿಸಲಾಯಿತು.** ನಿಡಿ.1 ವಿಲ್ ನಲ್ಲಿ ಧರ್ಮರತ್ನ ಮತ್ತು ಪಾರ್ವತಮ್ಮನವರಿಗೆ ಆಸ್ತಿಯನ್ನು ನೀಡಿಲಾಗಿರುತ್ತದೆ ಎಂದರೆ ನಿಜ. ನಿಡಿ.2 ರಲ್ಲಿ ಪಾರ್ವತಮ್ಮನವರಿಗೆ ಐಟಂ ನಂ.4 ಆಸ್ತಿಯನ್ನು ನೀಡಲಾಗಿರುತ್ತದೆ ಎಂದರೆ ನಿಜ. ಅದೇ ರೀತಿ 2 ನೇ ವಾದಿ ಧರ್ಮರತ್ನರವರಿಗೆ ವಿಲ್ ನಲ್ಲಿ ಐಟಂ ನಂ.5 ಆಸ್ತಿಯನ್ನು ನೀಡಲಾಗಿರುತ್ತದೆ ಎಂದರೆ ನಿಜ. ಧರ್ಮರತ್ನ ಮತ್ತು ಪಾರ್ವತಮ್ಮನವರಿಗೆ ವಿಲ್ ನಲ್ಲಿ ಆಸ್ತಿ ನೀಡಿದ ಕಾರಣ ಸದರಿ ರಮೇಶ್ ರವರು ನನ್ನ ಮುಖಾಂತರ ಈ ವ್ಯಾಜ್ಯದಲ್ಲಿ ಸಾಕ್ಷಿ ನೀಡುವಂತೆ ಮಾಡಿರುತ್ತಾರೆ ಎಂದರೆ ಸುಳ್ಳು. 2 ನೇ ಪ್ರತಿವಾದಿ ಈ ದಿನ ನ್ಯಾಯಾಲಯಕ್ಕೆ ಬಂದರೂ ನ್ಯಾಯಾಲಯದ ಒಳಗಡೆ ಬರದೇ ಹೊರಗಡೆ ಇರುತ್ತಾರೆ ಎಂದರೆ ನಿಜ.

This is a True Copy of the Court Records Online. Authenticated @ districts.ecourtsindia.com/cnr/KABR020012132021/truecopy/order-3.pdf

13. ದಾವಾ ಸ್ವತ್ತುಗಳು ನನ್ನ ತಾಯಿಯ ಗಂಡನ ಕಡೆಯಿಂದ ಬಂದ ಆಸ್ತಿಯಾಗಿರುವುದಿಲ್ಲ ಬದಲಾಗಿ ನನ್ನ ತಾಯಿಯ ತಂದೆಯ ಕಡೆಯಿಂದ ಬಂದ ಆಸ್ತಿಗಳು ಎಂದರೆ ನಿಜ. ದಾವಾ ಸ್ವತ್ತು ನನ್ನ ತಾಯಿಯ ತಂದೆಯ ಕಡೆಯಿಂದ ಬಂದ ಆಸ್ತಿಯಾಗಿರುವುದರಿಂದ ಅದು ಅವರ ಸ್ವಯಾರ್ಜಿತ ಆಸ್ತಿಯಾಗಿದ್ದು ಅದರಲ್ಲಿ ನನ್ನ ತಂದೆಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಕೇಳಿದ ಪ್ರಶ್ನೆಗೆ ಹೌದು ಎಂದು ಉತ್ತರ ನೀಡಿರುತ್ತಾರೆ. ದಾವಾ ಸ್ವತ್ತು ನನ್ನ ತಾಯಿಯ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಅವರು ಬದುಕಿರುವಾಗ ಅವರು ಯಾರಿಗಾದರೂ ಮಾರಾಟ ಮಾಡಲು ಹಕ್ಕು ಇತ್ತು ಎಂದರೆ ಬದುಕಿರುವಾಗ ಅವರಿಗೆ ಆ ರೀತಿಯ ಹಕ್ಕು ಇತ್ತು.

14. ನಿಡಿ.2 ರಲ್ಲಿ ಚೆನ್ನಮ್ಮನವರಿಗೆ ಬಂದಂತಹ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸುಳ್ಳು. ಆ ರೀತಿ ನಾನು ಚೆನ್ನಮ್ಮನವರಿಗೆ ಬಂದ ಸ್ವತ್ತನ್ನು ಸೇರಿಸಿರುವುದಿಲ್ಲ ಎಂದರೆ ಸುಳ್ಳು. ನನ್ನ ತಾಯಿ ಯಾವುದೇ ವಹಿವಾಟು ಅಥವಾ ಪತ್ರ ವ್ಯವಹಾರ ಮಾಡುವಾಗ ಹೆಬ್ಬೆಟ್ಟು ಹಾಕುತ್ತಿದ್ದರು ಎಂದರೆ ನಿಜ. ನನಗೆ ಮೂರು ದಾಖಲೆಗಳನ್ನು ತೋರಿಸಲಾಯಿತು. ಸದರಿ ದಾಖಲೆಗಳು ನಿಡಿ.1 ರ ಪ್ರಕಾರ ಧರ್ಮರತ್ನ ಮತ್ತು ಪಾರ್ವತಮ್ಮನವರಿಗೆ ಆದ ಖಾತೆಯಾಗಿರುತ್ತದೆ ಎಂದರೆ ನಿಜ. **ಸದರಿ ದಾಖಲೆಗಳನ್ನು ನಿಡಿ.2 ರಿಂದ 4 ಎಂದು ಗುರುತಿಸಲಾಯಿತು.** ನನ್ನ ತಾಯಿ ಬದುಕಿರುವವರೆಗೂ 2 ನೇ ಪ್ರತಿವಾದಿಯವರ ಮನೆಯಲ್ಲಿ ಇದ್ದು 2 ನೇ ಪ್ರತಿವಾದಿಯವರೇ ನನ್ನ ತಾಯಿಯನ್ನು ಪಾಲನೆ ಪೋಷಣೆ ಮಾಡುತ್ತಿದ್ದರು ಎಂದರೆ ಸುಳ್ಳು. ಆ ರೀತಿ ನನ್ನ ತಾಯಿಯವರ ಆರೋಗ್ಯವನ್ನು 2 ನೇ ಪ್ರತಿವಾದಿ ನೋಡಿಕೊಳ್ಳುತಿದ್ದ ಕಾರಣ ದಿಃ 02.09.2010 ರಂದು ನನ್ನ ತಾಯಿಯವರು ಒಂದು ವಿಲ್ ನಾಮೆಯನ್ನು 2 ನೇ ಪ್ರತಿವಾದಿಯವರ ಹೆಸರಿನಲ್ಲಿ ಮಾಡಿರುತ್ತಾರೆ ಎಂದರೆ ಸುಳ್ಳು. 2 ನೇ ಪ್ರತಿವಾದಿ ಸದರಿ ವಿಲ್ ನ ಆಧಾರದಲ್ಲಿ ದಾವಾ ಸ್ವತ್ತುಗಳಿಗೆ ಕಾನೂನು ಬದ್ದ ಮಾಲೀಕರು ಆಗಿರುತ್ತಾರೆ ಎಂದರೆ ಸುಳ್ಳು. ಸದರಿ ವಿಲ್ ನ ಆಧಾರದ ಮೇಲೆ 2 ನೆ ಪ್ರತಿವಾದಿಯವರ ಹೆಸರಿನಲ್ಲಿ ಹುರುಳಿ ಚಿಕ್ಕನಹಳ್ಳಿಯ ಗ್ರಾಮ ಪಂಚಾಯಿತಿಯವರು ದಾವಾ ಐಟಂ

This is a True Copy of the Court Records Online. Authenticated @ districts.ecourtsindia.com/cnr/KABR020012132021/truecopy/order-3.pdf

ನಂ.1 ಸ್ವತ್ತಿನ ಸಂಬಂಧ ಖಾತೆ ಮಾಡಿರುತ್ತಾರೆ ಎಂದರೆ ಸುಳ್ಳು. ಆ ರೀತಿ ಖಾತೆ ಬದಲಾವಣೆ ಮಾಡಿಕೊಂಡು 2 ನೇ ಪ್ರತಿವಾದಿ ದಾವಾ ಐಟಂ ನಂ.1 ಸ್ವತ್ತಿನಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಾಗಿ ಇರುತ್ತಾರೆ ಎಂದರೆ ಅ ರೀತಿ ವಾಸವಾಗಿ ಇರಬಹುದು ಆದರೆ ನನ್ನ ತಾಯಿ ಯಾವುದೇ ದಾಖಲೆಗಳನ್ನು 2 ನೇ ಪ್ರತಿವಾದಿಯವರಿಗೆ ಮಾಡಿಕೊಟ್ಟಿಲ್ಲ. 2 ನೇ ಪ್ರತಿವಾದಿ ಆ ರೀತಿ ದಾವಾ ಐಟಂ ನಂ.1 ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡಿ ಖಾತೆ ಕಂದಾಯವನ್ನು ಪಾವತಿ ಮಾಡಿಕೊಂಡು ಇರುತ್ತಾರೆ ಎಂದರೆ ಖಾತೆ ಕಂದಾಯವನ್ನು ನನ್ನ ತಾಯಿಯ ಹೆಸರಿನಲ್ಲಿ ಕಟ್ಟುತ್ತಿದ್ದಾರೆ. ದಾವಾ ಐಟಂ ನಂ.1 ಸ್ವತ್ತಿನಲ್ಲಿ ಇರುವ ಮನೆ 2 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಮಕ್ಕಳು ವಾಸ ಮಾಡುತ್ತಿದ್ದಾರೆ ಎಂದರೆ ನಿಜ ಆದರೆ ದಾವಾ ಸ್ವತ್ತುಗಳಲ್ಲಿ ನಮಗೆ ಹಕ್ಕು ಇರುತ್ತದೆ.

15. ನಾನು ಹಾಗೂ ನನ್ನ ಅಕ್ಕಂದಿರು ಮದುವೆಯಾಗಿ ನಮ್ಮ ನಮ್ಮ ಗಂಡನ ಮನೆಯಲ್ಲಿ ವಾಸವಾಗಿರುತ್ತೇವೆ ಎಂದರೆ ನಿಜ. ಆ ಕಾರಣ ದಾವಾ ಐಟಂ ನಂ.1 ರ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ದಾವಾ ಸ್ವತ್ತಿನಲ್ಲಿ ನಮಗೆ ಹಕ್ಕು ಇರುತ್ತದೆ. ನನ್ನ ತಾಯಿಯವರು ಮಾಡಿದ ಮರಣ ಶಾಸನದಂತೆ ಖಾತೆಯಾಗಬಹುದು ಎಂದು ನಾನು ಹಾಗೂ ನನ್ನ ಅಕ್ಕಂದಿರು ತಹಸಿಲ್ದಾರ್ ರವರೆ ಪ್ರಮಾಣಪತ್ರ ನೀಡಿರುತ್ತೇವೆ ಎಂದರೆ ಸುಳ್ಳು.

(ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದುವರೆದ ಪಾಟೀ ಸವಾಲಿಗಾಗಿ ರೂ.500/- ಶುಲ್ಕದ ಮೇಲೆ ಮುಂದೂಡಲಾಯಿತು)

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ. ಇದೆ

(ಅಬ್ದುಲ್ ಸಲೀಂ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಬೆಂಗಳೂರು ಗ್ರಾಮಾಂತರ ಜಿಲ್ಲೆ , ಬೆಂಗಳೂರು

This is a True Copy of the Court Records Online. Authenticated @ districts.ecourtsindia.com/cnr/KABR020012132021/truecopy/order-3.pdf